ಶ್ರೀ ಬಿ. ಹುಚ್ಚೇಗೌಡರು.— ಕುಣಿಗಲನಲ್ಲಿರುವ ರೇಸ್ ಹಾರ್ಸಸ್ ಕೂಡ ಇಲ್ಲಿ ಇಟ್ಟರೆ ಖರ್ಚು ಕಡಿಮೆ ಯಾಗುವುದಿಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗೆ ಮಾಡು ವುದಕ್ಕಾಗುವುದಿಲ್ಲ. ಇದಕ್ಕೆ ಕುಣಿಗಲೇ ಸರಿಯಾದ ಜಾಗವೆಂದು ರೇಸ್ ಹಾರ್ಸಸ್ ಪ್ರವೀಣರು ಹೇಳಿದ್ದಾರೆ.

ಶ್ರೀ ಬಿ ಹುಚ್ಚೇಗೌಡರು.—ಇದು ಹಣ ಬರುವ ವಿಷಯವಾದುದರಿಂದ ಸರಿಯಾಗಿ ಏರ್ಪಾಡು ಮಾಡು ವುದು ಒಳ್ಳೆಯದಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈದು self-supporting ಆಗಬೇಕೆಂಬುದೇ ಸರ್ಕಾರದ ಉದ್ದೇಶ.

ಶ್ರೀ ಡಿ. ಎಚ್. ಚೆಂದ್ರಶೇಖರಯ್ಯನವರು (ಚಿತ್ರ ದುರ್ಗ ಜಿಲ್ಲೆ).—ಪಾಶ್ಚಿಮಾತ್ಯ ದೇಶಗಳಲ್ಲಿ ಇಂತಹ ಫಾರಂಗಳನ್ನು ಮಾಡಿರುವಕಡೆ ಅವು ಲಾಭದಾಯಕ ವಾಗಿ ನಡೆಯುತ್ತಿವೆ ಎಂಬುದು ಗೊತ್ತಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Research Stations ಲಾಭದಾಯಕವಾಗಿ ಆಗುವುದಿಲ್ಲವೆಂಬುದು ಗೊತ್ತು. ಆದರೆ breeding ಕೂಡ ಇಟ್ಟುಕೊಂ ಡಿರುವ ಕಡೆ ಲಾಭದಾಯಕವಾಗಿರಬಹುದು.

**Sri V. M. MASCARENHAS** (Retroceded Area—General).—Through what agency are the products of this farm marketed?

**The Hon'ble Sri T. MARIAPPA.**—For example eggs are sent to Bangalore and marketed through a Co-operative Society; in respect of milk, we call for tenders and the tendered contractor takes the milk and sells it in Bangalore; pony breeding—only remount breeding,—we supply it to the military and the Government of India, now that the lancers are transferred to the Government of India.

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ) ಹೆಸರಘಟ್ಟಫಾರಂನ ವಿಸ್ತೀರ್ಣ ಎಷ್ಟಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸುಮಾರು ಮೂರು ಸಾವಿರ ಎಕರೆಯಷ್ಟಿದೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಈ ಕೆಲಸಕ್ಕೆ ಅಷ್ಟೊ ಬೇಕಾಗುತ್ತದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಷ್ಟೊ ಬೇಕಾಗುತ್ತದೆ; ನಮ್ಮ ಕೆಲಸ ಹೆಚ್ಚಾಗಬೇಕಾದರೆ. ಇದರ ಜೊತೆಗೆ ಅಲ್ಲಿ ಆಹಾರ ಧಾನ್ಯವನ್ನೂ ಬೆಳೆಯು ತ್ತೇವೆ.

## Horticultural Farm at Maddur.

*Q.—185. **Sri S. RANGARAMIAH** (Mysore District—General).—

Will the Government be pleased to state :—

(*a*) when the Horticultural Farm at Maddur was opened by the Government;

(*b*) the person who is in-charge of it and the amount spent for the staff each year for the last three years;

(*c*) the income and expenditure of the farm for the last five years;

(*d*) the nature of crops grown therein and where they are marketed?

*A.*—**The Hon'ble Sri T. MARIAPPA** (Home Minister).—

(*a*) 1942.

(*b*) The Manager.

| | Rs. | a. | p. |
|---|---|---|---|
| 1947-48 ... | 4,666 | 0 | 0 |
| 1948-49 ... | 4,345 | 3 | 0 |
| 1949-50 ... | 4,963 | 0 | 0 |

(*c*)—

| | *Income.* | | | *Expenditure.* | | |
|---|---|---|---|---|---|---|
| | Rs. | a. | p. | Rs. | a. | p. |
| 1945-46 ... | 6,206 | 4 | 0 | 7,422 | 4 | 9 |
| 1946-47 ... | 5,845 | 0 | 0 | 7,634 | 0 | 0 |
| 1947-48 ... | 3,853 | 0 | 0 | 6,702 | 0 | 0 |
| 1948-49 ... | 6.931 | 6 | 3 | 11,310 | 11 | 0 |
| 1949-50 ... | 2,794 | 15 | 0* | 9,406 | 8 | 0 |

(*d*) Both Indian and European vegetables and fruits such as Papaya and Melon are grown. The vegetables are sold both in the Sales Depot attached to the Farm and also in Maddur Market and fruits are sold at the Maddur Railway Station.

ಶ್ರೀ ಎಸ್. ರಂಗರಾಮಯ್ಯನವರು.—ಮದ್ದೂರಿನ ಫಲಪುಷ್ಪ ವ್ಯವಸಾಯ ಕ್ಷೇತ್ರದ ವಿಸ್ತೀರ್ಣವೆಷ್ಟು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸುಮಾರು 52 ಎಕರೆ; ಖಚಿತವಾಗಿ ಹೇಳಲು ನೋಟೀಸ್ ಬೇಕು.

ಶ್ರೀ ಎಸ್. ರಂಗರಾಮಯ್ಯನವರು.—ಎಲ್ಲ ಭಾಗಕ್ಕೂ ನೀರಿನ ಅನುಕೂಲ ಮಾಡಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ, ಸ್ವಲ್ಪ ಭಾಗಕ್ಕೆ ನೀರು ಸರಬರಾಯಿಯಾಗುತ್ತದೆ. ಎಲ್ಲಕ್ಕೂ ಅನುಕೂಲಮಾಡಲು ಪಂಪು ಹಾಕಿಸಬೇಕೆಂದು ಉದ್ದೇಶ ವಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಈಗ ನೀರಾವರಿ ಆಗಿರುವುದೆಷ್ಟು, ಆಗದೇಯಿರುವುದೆಷ್ಟು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು.—ಅಲ್ಲಿಯ ಮ್ಯಾನೇಜರ್‌ಗೆ ನಂಬಳವೆಷ್ಟು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಡ್ಡೆಟ್ಟಿನಲ್ಲಿದೆ; ನೋಟೀಸು ಕೊಟ್ಟರೆ ಹೇಳುತ್ತೇನೆ.

ಶ್ರೀ ಎಸ್. ರಂಗರಾಮಯ್ಯನವರು.—ಅವರ ಕೈಕೆಳಗೆ ಸಿಬ್ಬಂದಿ ಎಷ್ಟು ಜನರಿದ್ದಾರೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್; ಖಚಿತ ಎಷ್ಟೆಂದು ಹೇಳಿದ್ದೇನೆ, ಬಡ್ಡೆಟ್ಟಿನಲ್ಲಿದೆ.

* Excluding the cost of free supply of plants to Vanamahotsavam.

ಶ್ರೀ ಎಸ್. ರಂಗರಾಮಯ್ಯನವರು.—ಇದು 1942 ನೆಯ ಇಸವಿಯಲ್ಲಿ ಪ್ರಾರಂಭವಾದದ್ದು, ಇದರ ಆದಾಯವೆಚ್ಚಗಳನ್ನು ನೋಡಿದರೆ 1947ನೆಯ ಇಸವಿಯಿಂದಲೂ ವಿಪರೀತ ನಷ್ಟವಾಗುತ್ತಿದೆ. ಇದಕ್ಕೆ ಕಾರಣವೇನು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದು research and demonstration ಫಾರಂ ಆದುದರಿಂದ ಸ್ವಲ್ಪ ನಷ್ಟವಾಗಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಮ್ಯಾನೇಜರ್ ಏನು ಪ್ರಯತ್ನ ಮಾಡಿದ್ದಾರೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು.—ಹಾಗಾದರೆ ಅವರಿಗೆ ಏನೂ ಬರುವುದಿಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವರು ಮಾಡುತ್ತಿರುವ ಕೆಲಸವಲ್ಲಿ ಪರಿಶ್ರಮವಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಅವರು ಯಾವ ಕಾಲದಲ್ಲಿ ಓದಿದ್ದಾರೆ, ಏನು ವಿದ್ಯಾಭ್ಯಾಸ ಮಾಡಿದ್ದಾರೆಂಬುದು ಗೊತ್ತಿಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕೆಂದು ಹೇಳಿದ್ದೇನೆ.

ಶ್ರೀ ಎಸ್. ರಂಗರಾಮಯ್ಯನವರು.—ಇವರು ಯಾವ ಕಾಲೇಜಿನಲ್ಲಿ ಓದಿ, ಏನು ವಿದ್ಯಾಭ್ಯಾಸ ಮಾಡಿದ್ದಾರೆ ?

(ಉತ್ತರವಿಲ್ಲ.)

ಶ್ರೀ ಎಸ್. ರಂಗರಾಮಯ್ಯನವರು.—ಕೊನೆಯಲ್ಲಿ ವನಮಹೋತ್ಸವಕ್ಕಾಗಿ ಗಿಡಗಳನ್ನು ವಿಫಲತ್ಪಾಗಿ ನರಬರಾಯಿಮಾಡಲು ತಗುಲಿದ ವೆಚ್ಚ ಇದರಲ್ಲಿ ಸೇರಿರುವುದಿಲ್ಲವೆಂದು ತಿಳಿಸಲಾಗಿದೆ. ಆ ವೆಚ್ಚ ಎಷ್ಟಾಗುತ್ತದೆ, ಸ್ವಾಮಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲಿ ಬೆಳೆಯಲಾದ ಗಿಡಗಳ ಹೈಕಿ ಕೆಲವು ಹೂವಿನ ಮತ್ತು ಹಣ್ಣಿನ ಗಿಡಗಳನ್ನು ವನಮಹೋತ್ಸವ ಕಾಲದಲ್ಲಿ ಗ್ರಾಮ ಪಂಚಾಯಿತಿಗಳವರಿಗೂ ಮತ್ತು ಜಿಲ್ಲಾ ಬೋರ್ಡುಗಳವರಿಗೂ ಉಚಿತವಾಗಿ ನರಬರಾಯಿ ಮಾಡಲಾಯಿತು. ಆ ವೆಚ್ಚ ಇದರಲ್ಲಿ ಸೇರಿಸಿರುವುದಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ತಾವು ಫಲ ಪುಷ್ಪದ ವ್ಯವಸಾಯಕ್ಷೇತ್ರವೆಂದು ಹೇಳಿದ್ದೀರಿ. ಈ ಹೈಕಿ ಫಲ ವೃಕ್ಷಗಳಾವುವು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಾಮಾನ್ಯವಾಗಿ ಬೆಳೆಯಬೇಕೆಂದು ಹೇಳಿರತಕ್ಕ ಮರಗಳು ಯಾವುವೆಂದರೆ: ಹೊಂಗೆಮರ, ಹಿಪ್ಪೆಮರ, ನೇರಳೆಮರ, ಇತ್ಯಾದಿಗಳು.

ಶ್ರೀ ಎಸ್. ರಂಗರಾಮಯ್ಯನವರು.—ಹೀಗೆ ಗಿಡಗಳನ್ನು ತಾವು ಯಾವಾಗಿನಿಂದ ಜನರಿಗೆ ಒದಗಿಸುತ್ತಿದ್ದೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸುಮಾರು ಇಲ್ಲಿಯತನಕ 6 000 ಗಿಡಗಳನ್ನು ಬೆಳೆಯಲಾಯಿತು. ಇನ್ನು ಈ ವರ್ಷದಿಂದಲೇ ಇವುಗಳನ್ನು ಜನರಿಗೆ ಕೊಡಲಾಗುತ್ತಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಹಾಗೆ ನೀವು ನರಬರಾಯಿಮಾಡಿದ ಗಿಡಗಳೇನು ಒಂದು ವರ್ಷ ಮಾತ್ರ ಇರತಕ್ಕಂಥಾ ಗಿಡಗಳೋ ? ಅಂದರೆ ಒಂದೇ ವರ್ಷದಲ್ಲಿ ಖರ್ಚು ಆಗುವುವುಗಳೋ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಾಧಾರಣವಾಗಿ ಈಗ ನಾವು ಕೊಡುತ್ತಿರುವ ಗಿಡಗಳು ಎಂಥಹವು ಎಂಬುದು ಮಾನ್ಯ ಸದಸ್ಯರಿಗೇ ಗೊತ್ತಿದೆ. ಈ ಬಗ್ಗೆ ಈಗಾಗಲೇ ನಾನೇ ಖುದ್ದಾಗಿ ಸ್ಥಳಕ್ಕೆ ಹೋಗಿ ಎಲ್ಲವನ್ನೂ ಪರಾಂಬರಿಸಿ ನೋಡಿ, ಅಲ್ಲಿರತಕ್ಕ ಸಿಬ್ಬಂದಿಯವರಿಗೆ ನೀವು ಈ ಬಗ್ಗೆ ಸರಿಯಾದ ಕಾರ್ಯಕ್ರಮಗಳನ್ನು ಕೈಗೊಂಡು ಇದನ್ನು ಬೇಗ ಅಭಿವೃದ್ಧಿಗೆ ತಂದರೆ ಸಮ, ಇಲ್ಲವಾದಲ್ಲಿ ಈ ಫಾರಂನ್ನೇ ಒರತಪ್ಪು ಮಾಡಲಾಗುತ್ತದೆಂದು ಸಹ ಎಚ್ಚರಿಕೆ ಕೊಟ್ಟು ಬಂದಿದ್ದೇನೆ.

ಶ್ರೀ ಎಸ್. ರಂಗರಾಮಯ್ಯನವರು.—ಇಲ್ಲಿ ಬೆಳೆಯತಕ್ಕ ಜಾತಿಯ ತರಕಾರಿಗಳನ್ನು ಮತ್ತು ಪರಂಗೀ ದೇಶದ ತರಕಾರಿಗಳನ್ನು ಮತ್ತು ಪರಂಗೀ ಹಣ್ಣು ಇತ್ಯಾದಿಗಳನ್ನು ಅಲ್ಲಿ ಈಗ ಬೆಳೆಯುತ್ತಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ತಾವು ಖುದ್ದಾಗಿ ಪರಾಂಬರಿಸಿ ನೋಡಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಲ್ಲಿ ಇನ್ನೂ ಹೆಚ್ಚಿನ ಅಂದರೆ ಅನಾನಸ್ ವಗೈರೆ ಎಲ್ಲವನ್ನೂ ಬೆಳೆಯಬೇಕೆಂದಿದ್ದೇವೆ. ಆದರೆ ಹೋದ ವರ್ಷ ಒಂದು ಹನಿ ಕೂಡ ಮಳೆ ಬಾರದೆ ಎಲ್ಲವೂ ಒಣಗಿಹೋಗಿವೆ. ಸರಿಯಾದ ನೀರು ಸರಬರಾಯಿ ಇಲ್ಲದಮೇಲೆ ಏನು ಮಾಡುವುದು ?

ಶ್ರೀ ಎಸ್. ರಂಗರಾಮಯ್ಯನವರು.—ಈ ಫಾರಂನ್ನು ಮುದ್ದೂರಿನಲ್ಲಿರುವ ಸಕ್ಕರೆ ಕಂಪೆನಿಯವರಿಗೆ ಕೊಡುವುದಾಗಿ ವರ್ತಮಾನ ಕೇಳಿ ಬರುತ್ತಿದೆ. ಅದರ ನಿಜಾಂಶವೇನು ?

The Hon'ble Sri T. MARIAPPA.—It is purely a matter of opinion.

ಶ್ರೀ ಎಸ್. ರಂಗರಾಮಯ್ಯನವರು.—ಈಗ ಅವರ ಮೇಲೆ ಯಾರು ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ ?

ಅಧ್ಯಕ್ಷರು.—ಆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ನೋಡಿಕೊಳ್ಳುತ್ತಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಅವರಿಂದ ಈ ಬಗ್ಗೆ ತಾವೇನಾದರೂ ವರದಿಗಳನ್ನು ತರಿಸಿಕೊಳ್ಳುತ್ತಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆದರೆ ಈಗ ಖರ್ಚು ಹೆಚ್ಚಾಗಿ ಬೀಳುತ್ತಿದೆ. ಉತ್ಪತ್ತಿ ಕಮ್ಮಿ. ಇದನ್ನು ಬೇಗ ಉತ್ತಮಪಡಿಸದೆಹೋದರೆ ಇದನ್ನು ತೆಗೆದುಹಾಕಬೇಕೆಂಬ ಅಭಿಪ್ರಾಯ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಈ ಫಲವೃಕ್ಷಗಳಿಗೆ ಬದಲಾಗಿ ರಾಗಿ, ಭತ್ತ ಇತ್ಯಾದಿಗಳನ್ನು ಬೆಳೆದರೆ ಆಹಾರ ಪರಿಸ್ಥಿತಿಯಾದರೂ ಉತ್ತಮಗೊಳ್ಳಬಹುದೆಂಬ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಿನ್ನೂ ಮುಂದಿನ ವಿಚಾರವಾಯಿತು.

ಶ್ರೀ ಎಚ್. ಕೆ. ವೀರಣಗೌಡರು (ಮಂಡ್ಯಜಿಲ್ಲೆ).—ತಾವು ಇಲ್ಲಿ ತೋರಿಸಿರತಕ್ಕ ವೆಚ್ಚದ ಪಟ್ಟಿಯಲ್ಲಿ ಸಿಬ್ಬಂದಿ ಖರ್ಚು ಮತ್ತು ಫಾರಮ್ಮಿನ ಖರ್ಚು ಎರಡೂ ಸೇರಿವೆಯೋ ಅಥವಾ ಸಿಬ್ಬಂದಿ ಖರ್ಚನ್ನು ಬಿಟ್ಟು ತಿಳಿಸಿದ್ದೀರೋ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದರಲ್ಲೇ ಎಲ್ಲಾ ಖರ್ಚುಗಳೂ ಎಂದರೆ ಸಿಬ್ಬಂದಿ, ಕೂಲಿಯವರ ಖರ್ಚುಗಳೆಲ್ಲಾ ಸೇರಿವೆ.

ಶ್ರೀ ಎಚ್. ಕೆ. ವೀರಣ್ಣಗೌಡರು.—ನೀರು ಇಲ್ಲವೆಂದು ತಾವು ಹೇಳಿದಮೇಲೆ ಈ ವರ್ಷ ಅಲ್ಲಿ ಪರಂಗೀ ಹಣ್ಣುಗಳನ್ನು ಬೆಳೆದಿದ್ದಾರೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇತ್ತೀಚಿನ ಸಮಾಚಾರಗಳು ನನಗೆ ಗೊತ್ತಿಲ್ಲ.

ಶ್ರೀ ಎಚ್. ಕೆ ವೀರಣ್ಣಗೌಡರು.—ನೀರು ಸರಬರಾಯಿ ಆದಮೇಲೂ ಸಹ ಅಲ್ಲಿ ಯಾವ ಹಣ್ಣುಗಳನ್ನೂ ಸಹ ಬೆಳೆಯುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಚ್. ಕೆ. ವೀರಣ್ಣಗೌಡರು.—ಈ ಫಾರಂ ರಾಧದಾಯಕವಾಗಿ ಕಂಡುಬಾರದೆ ಹೋದಲ್ಲಿ ತಾವಾಗಿಯೇ ಇದನ್ನು ಮಂಡ್ಯ ಸಕ್ಕರೆ ಕಾರ್ಖಾನೆಯವರಿಗೆ ಕೊಡಬೇಕೆಂದಿದ್ದೀರೋ ಅಥವಾ ಮಂಡ್ಯ ಸಕ್ಕರೆ ಕಾರ್ಖಾನೆಯವರೇನಾದರೂ ಕೇಳಿದ್ದರೊ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಲ್ಲಿ ನಾನು ಅವರಿಗೆ ಎಲ್ಲಾ ತಿಳುವಳಿಕೆಗಳನ್ನೂ ಕೊಟ್ಟು ಆದಷ್ಟು ಬೇಗ ಮರಗಳನ್ನು ಬೆಳೆಸಿ ಸ್ವಪರಿಪೂರ್ಣತೆಯನ್ನು ಈ ಫಾರಂ ಪಡೆಯುಬೇಕೆಂದು ತಿಳಿಸಿದ್ದೇನೆ. ಹಾಗೆ ಆದು ಸ್ವಪರಿಪೂರ್ಣತೆ ಹೊಂದದೆ ಹೋದರೆ ಸರ್ಕಾರದವರೇ ಇದನ್ನು ಏನೇವಾರಿ ಮಾಡಬೇಕೆಂದಿದ್ದಾರೆ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಹಾಗಾದರೆ ತಾವಾಗಿಯೇ ಅವರಿಗೆ ತಿಳಿಸಲಿಲ್ಲವೊ ?

**The Hon'ble Sri T. MARIAPPA.**—They were also deeply interested in the Farm because the main idea is that this should be an experimental farm with a view to encouraging the ryots to take to vegetable growing.

ಶ್ರೀ ಎಚ್. ಕೆ. ವೀರಣ್ಣಗೌಡರು.—ಸಕ್ಕರೆ ಕಂಪೆನಿಯವರು ಮರಗೆಣಸನ್ನು ಬೆಳೆದ ಕೊಟ್ಟರೆ ಎಕರೆಗೆ ಏನು ರೂಪಾಯಿಗಳನ್ನು ಕೊಡಬೇಕೆಂದು ತಮ್ಮನ್ನು ಕೇಳಿದ್ದಾರೆ ?

**The Hon'ble Sri T. MARIAPPA.**—Purely a matter of talk.

ಶ್ರೀ ಎಚ್. ಕೆ. ವೀರಣ್ಣಗೌಡರು.—ಇದು ಊರಿನ ಪಕ್ಕದಲ್ಲಿರುವ ಜಮೀನಾಗಿದ್ದು, ಬಹಳ ಫಲವತ್ತಾಗಿರುವುದರಿಂದ ರೈತರಿಗೂ ಸಕ್ಕರೆ ಕಂಪೆನಿಗೂ ಇದರಮೇಲೆ ಕಣ್ಣು ಬಿದ್ದಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ? ಅಥವಾ ಸಕ್ಕರೆ ಕಂಪೆನಿಗೆ ಯಾವ ಷರತ್ತಿನ ಪ್ರಕಾರ ಕೊಡಬೇಕೆಂದಿದ್ದೀರಿ ?

**The Hon'ble Sri T. MARIAPPA.**—It was purely a matter of negotiation. I am not prepared to disclose all that. The soil also is not very rich.

ಶ್ರೀ ಎಚ್. ಕೆ. ವೀರಣ್ಣಗೌಡರು.—ಇದು ಫಲವತ್ತಾದ ಭೂಮಿಯಲ್ಲವೆಂಬುದು ತಮ್ಮ ಅಭಿಪ್ರಾಯವೋ ಅಥವಾ ಇಲಾಖೆಯವರ ಅಭಿಪ್ರಾಯವೋ ?

**The Hon'ble Sri T. MARIAPPA.**—The Head of the Department has told me that the soil is not very rich.

ಶ್ರೀ ಎಚ್. ಕೆ. ವೀರಣ್ಣಗೌಡರು.—ರಾಗಿ ಬೆಳೆಗೆ ಈ ಭೂಮಿ ಬಹಳ ಫಲವತ್ತಾಗಿರುವುದರಿಂದ, ಇದಕ್ಕೆ ಹೆಚ್ಚು ಹಕ್ಕುದಾರರಾಗಿರತಕ್ಕಂಥ ರೈತರುಗಳು ಬಂದು ಇದನ್ನು ತಮಗೇ ಕೊಡಬೇಕೆಂದು ತಮ್ಮಲ್ಲಿ ಕೇಳಿ ಕೊಂಡಿಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನನಗೆ ಪ್ರಾಪಕವಿಲ್ಲ. That soil is not very rich.

ಶ್ರೀ ಎಚ್. ಕೆ. ವೀರಣ್ಣಗೌಡರು.—ಈ ಜಮೀನನ್ನು ಹಾಗೆ ಒಂದುವೇಳೆ ಸಕ್ಕರೆ ಕಾರ್ಖಾನೆಗೆ ಕೊಡದೆ ರೈತರಿಗೆ ರಾಗಿಯನ್ನು ಬೆಳೆಯಲು ಕೊಟ್ಟರೆ ಇದರಿಂದ ದೇಶದಲ್ಲಿ ಈಗ ಉಂಟಾಗಿರತಕ್ಕ ಆಹಾರಾಭಾವವನ್ನು ನೀಗಲು ಸಹಾಯವಾಗುತ್ತದೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ಫಾರಮನ್ನು ಮಾಡಿದ ಮುಖ್ಯ ಉದ್ದೇಶ ಇದೊಂದು Educative farm ಆಗಿದ್ದು ಹಳ್ಳಿಗಾಡಿನ ಜನರಿಗೆ ತರಕಾರಿ ಬೀಜಗಳನ್ನು ಒದಗಿಸಿ ತರಕಾರಿ ಬೆಳೆಯನ್ನು ಹೇಗೆ ಬೆಳೆಸಬೇಕೆಂಬುದನ್ನು ಜನರಿಗೆ ತಿಳಿಸಬೇಕೆಂಬುದೇ ಆಗಿದೆ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಈ ಫಾರಮಿನ ಉತ್ಪತ್ತಿ ಸಾಕಾದಷ್ಟು ಬಾರದಿದ್ದಾಗ್ಯೂ ಅಲ್ಲಿರತಕ್ಕ ನೌಕರರಿಗೆ ಸಂಬಳಸಾರಿಗೆಗಳನ್ನು ಕೊಟ್ಟುಕೊಂಡು ರೈತರಿಗೆ ಅನುಕೂಲಮಾಡಬಾರದೆಂಬುದು ತಮ್ಮ ಉದ್ದೇಶವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಖಂಡಿತ ಅದು ನಮ್ಮ ಉದ್ದೇಶವಲ್ಲ.

**Mr. SPEAKER.**—Question time is over.

---

## LEGISLATIVE BUSINESS

### The Mysore Inam Villages (Abolition of Inam Tenure) Bill, 1951.

*Motion to refer.*

**Mr. SPEAKER** (The Hon'ble Sri V. Venkatappa).—Hon'ble Member Sri Rangaramiah may continue his speech on the Inam Villages (Abolition of Inam Tenure) Bill, 1951.

### Hours of sittings of the Assembly from the next day.

**The Hon'ble Sri K. CHENGALARAYA REDDY** (Leader of the House).—Sir, before discussion on Bills is taken up, I wish to refer to one thing regarding the time for the holding of the sessions. There was a request made by Janab Mahmood Shariff that the session may be held in the morning. Yesterday I said that there was some difficulty in the holding of the session in the morning because of the Secretariat hours of work. The matter has since been examined again and so far as I am concerned, I am agreeable to have the session in the morning, instead of in the afternoon, between 8 and 12.30 or 1 as the House pleases. I have consulted the Hon'ble Leader of the Opposition and he is also agreeable to it. So I am submitting this to the